# ಪದಗಳಿಗೆ ಹೊಸ ಅರ್ಥ ತುಂಬಿದ ವಿವೇಕಾನಂದರು

ಡಾ. ಡಿ.ಕೆ. ರಾಜೇಂದ್ರ

ಜಗತ್ತಿನ ಮಹಾನ್ ಚಿಂತಕರೆಲ್ಲರೂ ಹೊಸ ಹೊಸ ಭಾವನೆಗಳನ್ನು ಹುಟ್ಟುಹಾಕುತ್ತಾರೆ; ಅದಕ್ಕೆ ತಕ್ಕುದಾದ ಹೊಸ ಭಾಷಾ ಅಭಿವ್ಯಕ್ತಿಯನ್ನೂ ಮಾಡುತ್ತಾರೆ. ಈ ಬಗೆಯ ಅಧ್ಯಯನವೇ ಒಂದು ರೋಚಕ ಅನುಭವ. ಈ ಕುರಿತು ಬರೆದಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

ಕಾಲ ಬದಲಾದಂತೆ ಕಾಲದ ಸ್ಥಿತಿಗತಿಗಳೂ ಬದಲಾಗುತ್ತವೆ. ಯಾವುದೋ ಕಾಲದಲ್ಲಿ ಹುಟ್ಟಿಕೊಂಡ ಜನರ ನಂಬಿಕೆಗಳು, ಆದರ್ಶಗಳು, ಅಭಿಪ್ರಾಯಗಳು ಎಲ್ಲ ಕಾಲಕ್ಕೂ ಅವೇ ಸತ್ಯವಾಗಿ ಶಾಶ್ವತವಾಗಿ ಉಳಿಯುತ್ತವೆ ಎಂದಲ್ಲ. ಆಯಾ ಕಾಲದ ಸಂದರ್ಭಗಳಿಗನುಗುಣವಾಗಿ, ಸನ್ನಿವೇಶಗಳಿಗನುಗುಣವಾಗಿ ಮನುಷ್ಯನ ಆಲೋಚನೆಗಳು, ಭಾವನೆಗಳು ಬದಲಾಗುವುದು ಸಹಜ.



ಅದಕ್ಕೆ ತಕ್ಕಂತೆ ತನ್ನ ರೀತಿ ನೀತಿಗಳನ್ನು ಬದಲಿಸಿಕೊಳ್ಳಲು ಅವನು ಬಯಸುವುದೂ ಅಷ್ಟೇ ಸಹಜ. ಬದಲಾವಣೆಯೇ ಪ್ರಗತಿಯ ಲಕ್ಷಣ. ಒಂದರಲ್ಲಿ ಕಾಣಿಸಿಕೊಂಡ ಬದಲಾವಣೆ ಹಾಗೂ ಅದರಿಂದ ಉಂಟಾದ ಪ್ರಭಾವ ಮತ್ತೊಂದಕ್ಕೆ ಪ್ರಚೋದನೆ ನೀಡುವುದರಲ್ಲಿ ಅನುಮಾನವಿಲ್ಲ. ಜಗತ್ತಿನ ಮಾನವನ ಇತಿಹಾಸವನ್ನು ಗಮನಿಸುತ್ತ ಬಂದರೆ ಅಂದಿನಿಂದ ಇಂದಿನವರೆಗೆ ಆ ಹಾದಿ ಹೇಗೆ ಸಾಗಿಬಂದಿದೆ? ಮರದ ಪೊಟರೆಯಲ್ಲಿಯೋ, ಗುಹೆಗಳಲ್ಲಿಯೋ ಜೀವಿಸುತ್ತಿದ್ದ ಮನುಷ್ಯ ಅರಮನೆಯಂತಹ ಗಗನಚುಂಬಿ ಕಟ್ಟಡಗಳನ್ನು ಕಟ್ಟಿಕೊಂಡು ಜೀವಿಸುವವರೆಗೆ ತನ್ನ ಪ್ರಗತಿಯನ್ನು ಕಂಡುಕೊಂಡದ್ದಾಗಲೀ; ಗೆಡ್ಡೆ ಗೆಣಸು ತಿನ್ನುತ್ತ, ಹಸಿಯ ಆಹಾರವನ್ನೇ ಸೇವಿಸುತ್ತಿದ್ದ ಮನುಷ್ಯ ವಿವಿಧ ಬಗೆಯ ಭಕ್ಷ್ಯಭೋಜ್ಯಗಳನ್ನು ಸೇವಿಸುವವರೆಗೆ ಪ್ರಗತಿ ಸಾಧಿಸಿದ್ದಾಗಲೀ ಅಥವಾ ಮಾನ ಮುಚ್ಚಲು ಮರದ ಎಲೆಗಳನ್ನೋ, ಪ್ರಾಣಿಯ ಚರ್ಮವನ್ನೋ ಉಡುಪಾಗಿ ಧರಿಸುತ್ತಿದ್ದವನು ಮಸ್ಲಿನ್ ಬಟ್ಟೆಯಂತಹ ಬಟ್ಟೆಯನ್ನು ತಯಾರಿಸಿ ತೊಡುವವರೆಗೆ ಉನ್ನತಿ ಹೊಂದಿದ್ದಾಗಲೀ ಸಾಮಾನ್ಯ ಸಂಗತಿ ಅಲ್ಲ. ಅದರ ಹಿಂದೆ ಪರಿಶ್ರಮವಿದೆ, ಬೌದ್ಧಿಕ ಬೆಳವಣಿಗೆ ಇದೆ, ವಿಚಾರ ಶಕ್ತಿ ಇದೆ, ಚಿಂತನ-ಮಂಥನವಿದೆ, ಕುಶಲತೆ ಇದೆ. ಹಾಗೆಯೇ, ಹೊಸತನ್ನ ಕಾಣುವ ಹಂಬಲವಿದೆ.

ಇದಿಷ್ಟೂ ಅವನ ಭೌತಿಕ ಉಳಿವಿಗಾಗಿ, ಬೆಳವಣಿಗೆಗಾಗಿ ಮಾಡಿಕೊಂಡದ್ದಾದರೆ ಅವನ ಬೌದ್ಧಿಕ ಹಾಗೂ ಮಾನಸಿಕವಾದ ಬೆಳವಣಿಗೆಯೂ ಅದರೊಂದಿಗೇ ಸಾಗಿಬಂದದ್ದನ್ನು ಗಮನಿಸಬಹುದು. ಒಂದು ರೀತಿ ಅವೆರಡೂ ಪರಸ್ಪರ ಪೂರಕ ಹಾಗೂ ಪ್ರೇರಕವಾದವುಗಳೇ. ಭೌತಿಕವಾದ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ಇಚ್ಛೆಯುಂಟಾದಾಗ ಅದರ ಜೊತೆಯಲ್ಲಿಯೇ ಬೌದ್ಧಿಕವಾದ ಚಟುವಟಿಕೆಯೂ ಕ್ರಿಯಾಶೀಲವಾಗಿರಲೇಬೇಕಾಗುತ್ತದೆ. ಮನಸ್ಸಿನ ಬೆಂಬಲವೂ ಅದಕ್ಕಿರುತ್ತದೆ. ವಿಚಾರ ಶಕ್ತಿ, ಸಂಶೋಧನ ದೃಷ್ಟಿ ಮುಂತಾದುವು ಗರಿಗೆದರಿ ಕಾರ್ಯೋನ್ಮುಖವಾಗುತ್ತವೆ.

ಹಾಗೇ ಆಚಾರ, ವಿಚಾರಗಳಿಗೆ ಸಂಬಂಧಿಸಿದ ಧಾರ್ಮಿಕವಾದ, ಸಾಮಾಜಿಕವಾದ ಸಂಗತಿಗಳೂ ಇದರಿಂದ ಹೊರತಾದವುಗಳಲ್ಲ. ಜನರ ನಂಬಿಕೆ ನಡಾವಳಿಗಳು ಆಯಾ ಕಾಲದ ಸ್ಥಿತಿಗತಿಗನುಗುಣವಾಗಿ ಹುಟ್ಟಿಕೊಂಡು, ಅವರ ಬದುಕಿಗೆ ಬೇಕಾದ ಕಟ್ಟುಪಾಡುಗಳನ್ನು ಅವು ಕಟ್ಟಿ ಕೊಟ್ಟಿರುತ್ತವೆ. ಆ ನಿಟ್ಟಿನಲ್ಲಿಯೇ ಅವರದ್ದೇ ಆದ ಸಾಮಾಜಿಕ ಕಟ್ಟುಪಾಡುಗಳು ಸಂಸ್ಕೃತಿಯ ರೂಪತಾಳಿ ಅಸ್ತಿತ್ವಕ್ಕೆ ಬಂದಿರುತ್ತವೆ. ಆದರೆ ಒಂದು ಮಾತಿದೆ, ''ಬದುಕು ಪ್ರತಿ ಕಾಲಘಟ್ಟದಲ್ಲೂ ಚಲನಶೀಲವಾದದ್ದು''. ವಿಚಾರಶಕ್ತಿ ಜಾಗೃತವಾದಷ್ಟೂ ಬದಲಾವಣೆಯ ಗತಿ ತೀವ್ರತೆಯನ್ನು ಹೆಚ್ಚಿಸಿಕೊಳ್ಳುತ್ತದೆ. ಆರಂಭದ ಕಾಲದಲ್ಲಿ ಅದರ ಬದಲಾವಣೆಯ ಗತಿ ಮಂದಗತಿಯದ್ದಾದರೂ ಆನಂತರದ ಕಾಲಘಟ್ಟಗಳಲ್ಲಿ ತೀವ್ರಗೊಂಡು ಸಮಾಜದ ಎಲ್ಲ ವಲಯಗಳನ್ನೂ ಆವರಿಸುತ್ತ ಬಂದದ್ದನ್ನು ಕಾಣುತ್ತೇವೆ. ಇತ್ತೀಚಿನ ಆಕ್ರಮಣಕಾರಿ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅದರ ವೇಗ ಮತ್ತಷ್ಟು ತೀವ್ರಗೊಂಡಿದೆ. ಆ ತೀವ್ರತೆ ಮಾನವ ಬದುಕಿನ ಯಾವ ಒಂದು ವಲಯವನ್ನೂ ಬಿಟ್ಟಿಲ್ಲ. ಅನೇಕ ಸಾಧು ಸಂತರು, ವಿಚಾರಶೀಲರು, ಕ್ರಾಂತಿಕಾರಿ ಮನೋಭಾವದವರು ಈ ಕಾರ್ಯವನ್ನು ನಿರಂತರ ಮಾಡುತ್ತ ಬಂದಿದ್ದಾರೆ. ಅದು ಜಗತ್ತಿನ ಭೌತಿಕ ಬೆಳವಣಿಗೆಗಷ್ಟೇ ಕಾರಣವಾಗಿಲ್ಲ ; ಬೌದ್ಧಿಕ, ವೈಚಾರಿಕ, ಧಾರ್ಮಿಕ ಹಾಗೂ ಆಧ್ಯಾತ್ಮಿಕವಾದ ಬೆಳವಣಿಗೆಗೂ ಕಾರಣವಾಗಿದೆ-ಭಾಷೆ, ಧರ್ಮ, ಸಮಾಜ ಹಾಗೂ ಸಂಸ್ಕೃತಿ ಎಲ್ಲವನ್ನೂ ಒಳಗೊಂಡಂತೆ.

ಈ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಹೇಳುವ 'ನಾಸ್ತಿಕ-ಆಸ್ತಿಕ' ಹಾಗೂ 'ನೈತಿಕತೆ-ಅನೈತಿಕತೆ' ಪದಗಳ ವಿವೇಚನೆ ಕುತೂಹಲಕಾರಿಯಾದದ್ದಷ್ಟೇ ಅಲ್ಲ, ಸ್ವಾರಸ್ಯಪೂರ್ಣ

ವಾದದ್ದು ಕೂಡ. ಹಾಗೇ ಅವರು ಬಳಸುವ 'ನಿರ್ಭಯತಾ ಧರ್ಮ' ಕೂಡ ವಿಶೇಷವಾದ ಅರ್ಥದಿಂದ ಕೂಡಿದ್ದು. ಅವುಗಳ ಮೂಲಾರ್ಥ ಏನೇ ಇದ್ದರೂ, ಅದನ್ನು ಬಳಸುವ ವ್ಯಕ್ತಿ ತನ್ನ ವಿಚಾರಶಕ್ತಿಯಿಂದ ಅದಕ್ಕೆ ತುಂಬುವ ಹೊಸ ಅರ್ಥ ಬೇರೆಯಾದಾಗ ಅದು ವಿಶೇಷತೆಯನ್ನು ಪಡೆದುಕೊಳ್ಳುತ್ತದೆ. ಅದು ಸಾಧ್ಯವಾಗುವುದು ಅದರ ಕರ್ತೃವಿನ ಸಾಮರ್ಥ್ಯದಿಂದ. ಒಬ್ಬ ಸಮರ್ಥ ಚಿಂತಕ, ವಿಚಾರವಂತನು ಒಬ್ಬ ಒಳ್ಳೆಯ ಭಾಷಾ ತಜ್ಞನೂ ಆಗಿರಬಲ್ಲ ಎಂಬುದಕ್ಕೆ ಅದು ನಿದರ್ಶನವಾಗುತ್ತದೆ.

ಈ ಒಂದು ದೃಷ್ಟಿಯಿಂದ ನೋಡುವಾಗ ಸ್ವಾಮಿ ವಿವೇಕಾನಂದರು ಒಬ್ಬ ಅಪ್ರತಿಮ ಚಿಂತಕರಾಗಿ ಅಷ್ಟೇ ಅಲ್ಲ, ಅಪ್ರತಿಮ ಭಾಷಾತಜ್ಞರಾಗಿಯೂ ಗೋಚರಿಸುತ್ತಾರೆ. ಅವರ ವಿಚಾರ ಶಕ್ತಿ, ಭಾಷಾಪ್ರೌಢಿಮೆ, ಹಾಗೂ ಅದನ್ನು ಅಭಿವ್ಯಕ್ತಿಸುವಲ್ಲಿ ವ್ಯಕ್ತವಾಗುವ ಅವರಲ್ಲಿನ ಚಮತ್ಕಾರ ಗುಣ ಅತಿಶಯವಾದದ್ದು. ಒಳ್ಳೆಯ ವಿಚಾರವನ್ನು ಒಳ್ಳೆಯ ರೀತಿಯಲ್ಲಿ ತಲುಪಿಸಲು ಒಳ್ಳೆಯ ಭಾಷೆಯೂ ಮುಖ್ಯವಾಗುತ್ತದೆ. ಬಿ.ಎಂ.ಶ್ರೀ ಅವರು ಭಾಷೆಯ ಬಗ್ಗೆ ಹೇಳುವ ಮಾತೆಂದರೆ, 'ಭಾಷೆ ಚೆನ್ನಾಗಿದ್ದಷ್ಟೂ ಭೂಷಣ.' ಅದು ಓದುಗನನ್ನು ಆಕರ್ಷಿಸುತ್ತದೆ. ಆ ಮೂಲಕ ವಿಷಯದತ್ತ ಗಮನ ಸೆಳೆಯುವಂತೆ ಮಾಡುತ್ತದೆ. ಅದೊಂದು ಕಲೆ.

**ಆಸ್ತಿಕ-ನಾಸ್ತಿಕ :** ಸ್ವಾಮಿ ವಿವೇಕಾನಂದರು ''ನಿಜವಾದ ನಾಸ್ತಿಕ ಯಾರು?'' ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಅದಕ್ಕೆ ಅವರು ಕೊಡುವ ವಿವರಣೆ ಹೀಗಿದೆ: ''ಯಾರಿಗೆ ತನ್ನಲ್ಲಿ ತನಗೇ ನಂಬಿಕೆ ಇಲ್ಲವೋ ಅವನು ನಾಸ್ತಿಕ'' ಎನ್ನುತ್ತಾರೆ. ಮುಂದುವರಿದು ಹೇಳುತ್ತಾರೆ: ''ಹಳೆಯ ಧರ್ಮಗಳು ಹೇಳಿದುವು, ದೇವರನ್ನು ನಂಬದವನು ನಾಸ್ತಿಕ ಎಂದು. ಹೊಸ ಧರ್ಮ ಹೇಳುತ್ತದೆ – ಯಾರಿಗೆ ತನ್ನಲ್ಲಿ ನಂಬಿಕೆ ಇಲ್ಲವೋ ಅವನು ನಾಸ್ತಿಕ ಎಂದು''. ದೇವರು, ಧರ್ಮ, ನಂಬಿಕೆ ಹಾಗೂ ಅವನ್ನು ಅವಲಂಬಿಸಿದ ಮನುಷ್ಯ ಇವುಗಳ ಸಂಗತದಲ್ಲಿ ಹೊಸತೊಂದು ಆಲೋಚನೆಯನ್ನು, ಚಿಂತನೆಯನ್ನು ಸ್ವಾಮೀಜಿ ವಿಶ್ಲೇಷಿಸಿದ್ದಾರೆ. ದೇವರು, ಧರ್ಮದ ಮಹತ್ವವನ್ನು ಅರಿತಿರುವ ಅವರು ಅವೆಲ್ಲಕ್ಕಿಂತ ನಂಬಿಕೆಗೆ ಒತ್ತುಕೊಟ್ಟಿರುವುದು ವಿಶೇಷವಾಗಿದೆ. ಹೊಸ ಧರ್ಮ-ಹಳೆ ಧರ್ಮಗಳ ವಿವೇಚನೆಯಲ್ಲಿ 'ಕಾಲಧರ್ಮ'ವನ್ನು ಪರಿಗಣಿಸಿರುವುದು ಗಮನಾರ್ಹ. ''ಮುನ್ನೂರ ಮೂವತ್ತು ಕೋಟಿ ದೇವರುಗಳಲ್ಲಿ ನಂಬಿಕೆ ಇಟ್ಟು ನಿಮ್ಮಲ್ಲಿ ನಿಮಗೆ ನಂಬಿಕೆ, ಶ್ರದ್ಧೆ ಇಲ್ಲವಾದರೆ ನಿಮಗೆ ಮುಕ್ತಿಯಿಲ್ಲ'' ಎಂಬ ಅವರ ಮಾತು ಚಿಂತನಶೀಲವಾದದ್ದು. ''ಶ್ರದ್ಧೆ ನೀ ಇದ್ದರೆ ನಾ ಗೆದ್ದೆ'' ಎಂಬ ದಿವ್ಯ ವಾಣಿ ಕೂಡ ಅವರದ್ದೇ.

ಹಿಂದೂಧರ್ಮದ ಬಗ್ಗೆ ಅಪಾರ ಗೌರವಭಾವನೆಯನ್ನು ಹೊಂದಿದ್ದರೂ, ಅಲ್ಲಿಯ ವಿಚಾರಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುವ ಅವರ ವಿಚಾರಧಾರೆ ವಿಶಿಷ್ಟ ಬಗೆಯದು. ವಿವೇಕಾನಂದರದು ಅನುಷ್ಠಾನ ದೃಷ್ಟಿಯೇ ಹೊರತು ಕುರುಡು ಅನುಕರಣೆಯಿಂದ ಕೂಡಿದ್ದಲ್ಲ. ಅವರ ಹಿತನುಡಿಯೊಂದು ಹೀಗಿದೆ: ''ನಿಮ್ಮೆಲ್ಲರ ಒಳಿತಿಗಾಗಿ ಒಂದು ಮಾತು ಹೇಳುತ್ತೇನೆ, ಪಶ್ಚಿಮದಿಂದ ಯಾವುದು ಬಂದಿದೆಯೋ ಅದನ್ನು ಒಮ್ಮೆಲೇ ಒಪ್ಪಿಕೊಳ್ಳಬೇಡಿ. ಸಾಕಷ್ಟು ಪುರಾವೆ, ಪರೀಕ್ಷೆಗಳ ನಂತರವೇ ಅದನ್ನು ಒಪ್ಪಿಕೊಳ್ಳಿ, ಇಲ್ಲವಾದರೆ ತಿರಸ್ಕರಿಸಿ. ಭಾರತೀಯ ಮೂಲದ್ದು ಯಾವುದಿದೆಯೋ ಅದನ್ನು ಮೊದಲು ಒಪ್ಪಿಕೊಂಡುಬಿಡಿ, ಸಾಕಷ್ಟು ಪುರಾವೆ ಸಿಕ್ಕ ಮೇಲೆಯೇ ಅದನ್ನು ತಿರಸ್ಕರಿಸಿ''. ಅವರ ಈ ಮಾತು ಸದಾ ನೆನಪಿನಲ್ಲಿಡಬೇಕಾದದ್ದು. ಅಪ್ಪ ಹಾಕಿದ ಆಲದಮರ ಎಂದು ನೇಣು ಹಾಕಿಕೊಳ್ಳುವುದು ಎಷ್ಟು ಸರಿ? ಪ್ರತ್ಯಕ್ಷ ಕಂಡರೂ ಪರಾಮರ್ಶಿಸಿ ನೋಡು ಎಂಬಂತೆ ವಿಮರ್ಶಕ ಬುದ್ಧಿಯನ್ನು ಎಚ್ಚರಗೊಳಿಸಿಕೊಂಡು ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ.

'ನಾಸ್ತಿಕ' ಪದಕ್ಕೆ ಸ್ವಾಮಿ ವಿವೇಕಾನಂದರು ಕೊಟ್ಟಿರುವ ಈ ಹೊಸ ವ್ಯಾಖ್ಯಾನ ಈ ದೃಷ್ಟಿಯಿಂದ ಮಹತ್ವದ್ದಾಗಿದೆ. ತನ್ನಲ್ಲೇ ತನಗೆ ನಂಬಿಕೆ, ವಿಶ್ವಾಸ ಇಲ್ಲದೆ ಹೋದರೆ ಅಂತಹವರಿಂದ ಯಾವ ಕೆಲಸವೂ ಪೂರ್ಣಗೊಳ್ಳುವುದಿಲ್ಲ. ನಂಬಿಕೆಯೇ ಇಲ್ಲವಾದರೆ ಅಲ್ಲಿ ಶ್ರದ್ಧೆ ಉಂಟಾಗಲು ಹೇಗೆ ಸಾಧ್ಯ? ಅವರ ದೃಷ್ಟಿಯಲ್ಲಿ ದೇವರನ್ನು ನಂಬದವನಷ್ಟೇ ನಾಸ್ತಿಕನಲ್ಲ, ತನ್ನಲ್ಲಿ ತನಗೆ ನಂಬಿಕೆ ಇಲ್ಲದವನು ನಿಜವಾದ ನಾಸ್ತಿಕ. ''ಆತ್ಮಶ್ರದ್ಧೆಯ ಹೊರತು ಬೇರೊಂದು ಶಕ್ತಿಯಿಲ್ಲ'' ಎಂಬ ಅವರ ಅಭಿಪ್ರಾಯ ಕೂಡ ಮನನೀಯ. ಈ ಹಿನ್ನೆಲೆಯಲ್ಲಿ ಅವರು ಮೇಲಿಂದ ಮೇಲೆ ಹೇಳುವ – ಸಂಕಲ್ಪ ಶಕ್ತಿ, ಇಚ್ಛಾಶಕ್ತಿ, ಛಲ, ಶ್ರದ್ಧೆ, ಬದ್ಧತೆ ಮುಂತಾದ ಪದಗಳು ವ್ಯಕ್ತಿ ತನ್ನನ್ನು ತಾನು ಹೇಗೆ ಶಕ್ತಿಶಾಲಿಯನ್ನಾಗಿಸಿಕೊಳ್ಳಬೇಕೆಂಬುದರ ಕಡೆ ಬೆರಳು ಮಾಡಿ ತೋರಿಸುತ್ತವೆ.

**ನೈತಿಕತೆ-ಅನೈತಿಕತೆ :** ಹಾಗೇ ಅವರು 'ನೈತಿಕತೆ' 'ಅನೈತಿಕತೆ' ಪದಗಳಿಗೆ ಕೊಡುವ ಸರಳ ಸುಂದರ ವ್ಯಾಖ್ಯಾನ ಕೂಡ ಅರ್ಥಪೂರ್ಣ ಅಷ್ಟೇ ಅಲ್ಲ, ಅತ್ಯಂತ ಆಕರ್ಷಕ. ಆ ಎರಡು ಪದಗಳಲ್ಲಿನ ಸತ್ಯಸಾರವನ್ನು ಪರಿಣಾಮಕಾರಿಯಾಗಿ ಭಟ್ಟಿ ಇಳಿಸಿದಂತೆ ಅನಾವರಣಗೊಳಿಸಿದ್ದಾರೆ: ''ಯಾವುದು ಒಂದುಗೂಡಿಸುವುದೋ ಅದು ನೈತಿಕತೆ, ಯಾವುದು ಬೇರ್ಪಡಿಸುವುದೋ ಅದು ಅನೈತಿಕತೆ''. ಒಳಿತು-ಕೆಡುಕುಗಳ, ಧರ್ಮ-ಅಧರ್ಮಗಳ, ಸತ್ಯ-ಅಸತ್ಯಗಳ, ಪಾಪ-ಪುಣ್ಯಗಳ ನೀತಿ-ಅನೀತಿಗಳ ಒಟ್ಟು ಚಿತ್ರಣವನ್ನು 'ಒಂದುಗೂಡಿಸು', 'ಬೇರ್ಪಡಿಸು' ಪದಗಳ ಮೂಲಕ ನೈತಿಕತೆ-ಅನೈತಿಕತೆಯ ಫಲಿತವನ್ನು ತುಂಬಿಕೊಟ್ಟಿದ್ದಾರೆ. ಧರ್ಮದ ಜೊತೆ ಜೊತೆಯಲ್ಲಿಯೇ ಮನುಷ್ಯಧರ್ಮ, ಕಾಲಧರ್ಮದ ಕಡೆಗೂ ಅವರ ದೃಷ್ಟಿ ಸದಾ ಎಚ್ಚರಗೊಂಡಿರುವುದನ್ನು ಕಾಣಬಹುದು. ಒಗ್ಗಟ್ಟಿನ ಮಂತ್ರ ಅವರ ಪ್ರತಿ ಮಾತಿನ ಅರ್ಥ ಹಾಗೂ ತಿರುಳು. ನೈತಿಕತೆ ಇಲ್ಲದ ಜೀವನ ಎಂದೂ ಒಳಿತನ್ನು ಕಾಣಲು, ಮಾಡಲು ಸಾಧ್ಯವಿಲ್ಲ. ಜೀವನದ ಎಲ್ಲ

ಬಗೆಯ ಅನಿಷ್ಟಗಳಿಗೆ ಅನೈತಿಕತೆಯೇ ಕಾರಣ. ನೈತಿಕತೆ-ಅದೊಂದು ಶಕ್ತಿ. ಸಂಜೀವಿನಿಗುಣದಿಂದ ಕೂಡಿದ್ದು. ''ಯಾವುದು ಸ್ವಾರ್ಥವೋ ಅದು ಅನೈತಿಕತೆ; ಯಾವುದು ನಿಸ್ವಾರ್ಥವೋ ಅದು ನೈತಿಕತೆ'' ಎಂಬ ವಿವೇಕಾನಂದರ ಮಾತು ನೈತಿಕತೆ ಪದಕ್ಕಿರುವ ಒಂದು ಸರಳ ಸೂತ್ರ, ವ್ಯಾಖ್ಯಾನ. ಮನುಷ್ಯ ಸ್ವಾರ್ಥಿಯಾದಾಗ ಲೋಭಿಯೂ ಆಗುತ್ತಾನೆ. ಪರರಚಿಂತೆ ಅವನಿಗಿರುವುದಿಲ್ಲ. ದಾನ, ಧರ್ಮ, ಕರುಣೆ ಅವನಿಂದ ದೂರವಾಗಿರುತ್ತವೆ. ತನಗೆ ಬೇಕಾದುದನ್ನು ಪಡೆಯಲು ಅವನು ಯಾವ ದಾರಿಯನ್ನಾದರೂ ಹಿಡಿಯಲು ಸಿದ್ಧನಿರುತ್ತಾನೆ. ಅದು ಅನೈತಿಕತೆಯಲ್ಲದೆ ಬೇರೆಯಾಗಿರಲು ಸಾಧ್ಯವಿಲ್ಲ. ''ವಿಶ್ವದ ಅತ್ಯುನ್ನತ ನಿಯಮ ಪ್ರತಿಷ್ಠೆಯಲ್ಲ , ಆತ್ಮಾರ್ಪಣೆ'' ಎಂಬ ಅವರ ನುಡಿಯಲ್ಲಿ ನೈತಿಕತೆಯ ಎಲ್ಲ ಮರ್ಮವೂ ಅಡಗಿದೆ.

**ನಿರ್ಭಯತಾಧರ್ಮ :** ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಮನುಷ್ಯನ ಎಲ್ಲ ಸೋಲಿಗೆ, ಅವನತಿಗೆ ಭಯವೇ ಮೂಲ ಕಾರಣ- ''ಭಯವೇ ಮೃತ್ಯು, ಭಯವೇ ಶತ್ರು''. ಹಾಗಾಗಿ ಅವರು ಹೇಳುವ ಮಾತೆಂದರೆ : ''ಬೋಧಿಸಲೇಬೇಕಾದ ಏಕೈಕ ಧರ್ಮವೆಂದರೆ ನಿರ್ಭಯತಾಧರ್ಮ. ಈ ಲೌಕಿಕ ಜಗತ್ತಿನಲ್ಲಾಗಲೀ, ಧಾರ್ಮಿಕ ಜಗತ್ತಿನಲ್ಲಾಗಲೀ ಪಾಪ-ಅವನತಿಗಳ ಖಚಿತ ಕಾರಣವು ಭಯವೇ ಎಂಬುದು ಸತ್ಯ. ಭಯವೇ ಸಂಕಟವನ್ನು ತರುವುದು, ಭಯವೇ ಮೃತ್ಯುವನ್ನು ತರುವುದು, ಭಯವೇ ಕೆಡುಕನ್ನು ತರುವುದು''. ''ನಿರ್ಭಯತಾಧರ್ಮ'' ಧರ್ಮದಷ್ಟೇ ಮುಖ್ಯ, ಅಷ್ಟೇ ಏಕೆ? ಅದನ್ನೂ ಮೀರಿದ್ದು ಎಂಬ ಅರ್ಥದ ಮಾತುಗಳನ್ನು ಆಡುವುದರ ಮೂಲಕ ಅದರ ಶಕ್ತಿಯನ್ನು ಸಾರುತ್ತಾರೆ. ''ಮೊಟ್ಟಮೊದಲನೆಯದಾಗಿ ನಮ್ಮ ಯುವಜನರು ಶಕ್ತಿಶಾಲಿಗಳಾಗಬೇಕು. ಧರ್ಮ ಆಮೇಲೆ ಬರುತ್ತದೆ'' ಎಂಬ ಅವರ ಮಾತಿನ ಅರ್ಥ, ಸಾಧನೆಗೆ ಧೈರ್ಯವನ್ನು ತಾಳಿ, ನಿರ್ಭೀತರಾಗಿ ಮುನ್ನುಗ್ಗುವುದೇ ಮುಖ್ಯ ಎಂಬ ಕಾರಣಕ್ಕಾಗಿ. ಹೇಡಿಗಳನ್ನು ಅವರು ಎಂದೂ ಹತ್ತಿರಬಿಟ್ಟುಕೊಳ್ಳಲು ಇಚ್ಛಿಸಿದವರಲ್ಲ. ಭಯ, ಅದೂ ಕೂಡ ದೌರ್ಬಲ್ಯದ ಒಂದು ಲಕ್ಷಣ. ಶಕ್ತಿ ಇದ್ದವನು, ಧೈರ್ಯ ಇದ್ದವನು ಏನನ್ನಾದರೂ ಮಾಡಲು ಸಾಧ್ಯ. ''ಶಕ್ತಿಯೇ ಜೀವನ-ದೌರ್ಬಲ್ಯವೇ ಮರಣ''. ಅಂತಹ ಭಯದಿಂದ ಮುಕ್ತರಾಗಿ ''ನಿರ್ಭಯತಾ ಧರ್ಮ'' ಪಾಲಿಸಲು ಕರೆ ನೀಡುತ್ತಾರೆ: ''ಯಾವುದೇ ವಿಚಾರವಾಗಲೀ ಅದು ನಿಮ್ಮ ಆಧ್ಯಾತ್ಮಿಕ ಶಕ್ತಿಯನ್ನು ಕುಂಠಿತಗೊಳಿಸುವಂತಿದ್ದರೆ, ಅಥವಾ ನಿಮ್ಮನ್ನು ಮಾನಸಿಕ ದೌರ್ಬಲ್ಯಕ್ಕೆ ಗುರಿ ಮಾಡುವಂತಿದ್ದರೆ, ಅಥವಾ ನಿಮ್ಮನ್ನು ದೈಹಿಕವಾಗಿ ದುರ್ಬಲಗೊಳಿಸುವಂತಿದ್ದರೆ ಅದನ್ನು ನಿಮ್ಮ ಕಾಲ್ಬೆರಳಿನಿಂದಲೂ ಸೋಂಕದಿರಿ! ಇದೇ ನನ್ನೆಲ್ಲ ಬೋಧನೆಯ ಮೊಟ್ಟಮೊದಲ ಮುಖ್ಯಾಂಶ''.

ಸ್ವಾಮಿ ವಿವೇಕಾನಂದರು ಭಾರತದ ಉದ್ದಗಲಕ್ಕೂ ಬರಿಗಾಲಲ್ಲಿ ಪರಿವ್ರಾಜಕರಾಗಿ ಸುತ್ತಾಡಿದವರು. ಅಲ್ಲಿಯ ಒಂದೊಂದು ಇಂಚನ್ನು ಅರ್ಥಮಾಡಿಕೊಂಡವರು. ಯುವಕರ ಮನಸ್ಸನ್ನು ಅರಿತವರು. ಅದಕ್ಕೆ ಕಾರಣಗಳನ್ನು ಹುಡುಕಿ ಪರಿಹಾರವನ್ನು ಮನಗಂಡವರು. ಪಾಶ್ಚಾತ್ಯ ದೇಶಗಳು ಅಷ್ಟೊಂದು ಮುಂದುವರಿಯುತ್ತಿರುವಾಗ ಭಾರತವೇಕೆ ಹೀಗಿದೆ? ಅಂತಹ ಕೊರತೆಗೆ ಕಾರಣಗಳೇನು? ಎಂದು ಮನಗಂಡು ಅದಕ್ಕಾಗಿ ಶ್ರಮಿಸಿದವರು. ಆ ಹಿನ್ನೆಲೆಯಲ್ಲಿಯೇ ಅವರು ಯುವಕರನ್ನು ಉದ್ದೇಶಿಸಿ ಮತ್ತೆ ಮತ್ತೆ ಹೇಳಿದ್ದು: ''ಪುರುಷರು, ಪುರುಷಸಿಂಹರು ಬೇಕಾಗಿದ್ದಾರೆ. ಉಳಿದದ್ದೆಲ್ಲವೂ ತನ್ನಷ್ಟಕ್ಕೆ ತಾನೇ ಸಿದ್ಧವಾಗುತ್ತದೆ...''

ಸ್ವಾಮಿ ವಿವೇಕಾನಂದರ ಚಿಂತನೆಗಳ ಬಗ್ಗೆ, ಅವರ ವಿಚಾರಧಾರೆಯ ಬಗ್ಗೆ ಹಾಗೂ ಯುವಕರ ಬಗೆಗಿನ ಕಾಳಜಿ ಬಗ್ಗೆ ಕುವೆಂಪು ವ್ಯಕ್ತಪಡಿಸಿರುವ ಅಭಿಪ್ರಾಯ ಇಲ್ಲಿ ಪ್ರಸ್ತುತವೆಂದು ಭಾವಿಸುತ್ತೇನೆ: ''ಸ್ವಾಮಿ ವಿವೇಕಾನಂದರ ತಪಃಪೂರ್ಣವಾದ ಶಕ್ತಿವಾಣಿಯಲ್ಲಿ ಆತ್ಮೋದ್ಧಾರಕವಾದ ವಿಭೂತಿಯು ಸ್ವಯಂ ಕ್ರಿಯಾಶೀಲವಾಗಿದೆ. ಅಲ್ಲಿ ಪತನ ಸಮಯದಲ್ಲಿ ನಮ್ಮನ್ನು ಕೈಹಿಡಿದೆತ್ತುವ ಔದಾರ್ಯವಿದೆ. ಹೃದಯ ದೌರ್ಬಲ್ಯ ಸಮಯದಲ್ಲಿ ನಮ್ಮ ಕ್ಲೈಬ್ಯವನ್ನು ಕಿತ್ತೊಗೆದು ಕೆಚ್ಚನ್ನು ನೆಡುವ ಸಿಡಿತಾಳ್ಮೆಯಿದೆ. ಬುದ್ಧಿಗೆ ಪುಷ್ಟಿಯಿದೆ, ಹೃದಯಕ್ಕೆ ತೃಪ್ತಿಯಿದೆ. ನಮ್ಮ ವ್ಯಕ್ತಿತ್ವ ಸಮಸ್ತವನ್ನೂ ಸರ್ವಾವಯವ ಸಂಪೂರ್ಣವಾಗಿ ವಿಕಾಸಗೊಳಿಸಿ ಪೂರ್ಣತೆಯಕಡೆಗೆ ನಮ್ಮನ್ನು ಕೊಂಡೊಯ್ಯುವ ಪೂರ್ಣದೃಷ್ಟಿಯೂ ಇಲ್ಲಿ ಸಿದ್ಧಿಸುತ್ತದೆ. ಇದು ಅಮೃತದ ಮಡು -ಮಿಂದರೆ ಪುನೀತರಾಗುತ್ತೇವೆ. ಇದು ಜ್ಯೋತಿಯ ಖನಿ-ಹೊಕ್ಕರೆ ಪ್ರಬುದ್ಧರಾಗುತ್ತೇವೆ.''

**ಉಪಸಂಹಾರ :** ಸ್ವಾಮಿ ವಿವೇಕಾನಂದರು ಒಬ್ಬ ಮಹಾನ್ ಚಿಂತಕ, ದಾರ್ಶನಿಕ, ಕನಸುಗಾರ ಅಷ್ಟೇ ಅಲ್ಲ , ತಾನು ಕಂಡದ್ದನ್ನು ನನಸಾಗಿಸುವ ಮಾಂತ್ರಿಕ. ಶಕ್ತಿಯೇ ಮಹಾಮಂತ್ರ ಎಂದು ತಿಳಿದವರು. ಅದನ್ನೇ ನಂಬಿ ಯುವಕರಲ್ಲಿ ಅದನ್ನು ಬಿತ್ತಲು ಅಹರ್ನಿಶಿ ದುಡಿದವರು. ಅವರ ಮಾತು ಮತ್ತು ಕೃತಿ ಎರಡೂ ಆದರ್ಶಪ್ರಾಯ. ಅವರ ಸಿಂಹಘರ್ಜನೆ ವಿಚಾರಗಳ, ಚಿಂತನೆಗಳ ಮಹಾಪೂರ. ಅವರ ಪದಸೃಷ್ಟಿ, ವ್ಯಾಖ್ಯಾನದ ವೈಖರಿ ಅದ್ಭುತ! ವಿಷಯವೈವಿಧ್ಯವಂತೂ ಅಪಾರ. ''ಭಾರತವನ್ನು ತಿಳಿಯಬೇಕೆಂದಿದ್ದರೆ, ವಿವೇಕಾನಂದರನ್ನು ಅಧ್ಯಯನ ಮಾಡಿ'' ಎಂಬ ರವೀಂದ್ರನಾಥ ಠಾಕೂರರ ಮಾತಿನಲ್ಲಿ ಅದೆಲ್ಲವೂ ಅಡಗಿದೆ. ಅವರ ಭಾಷಣದ ವಿಷಯದಲ್ಲಾಗಲಿ, ಲೇಖನಗಳ ವಿಷಯದಲ್ಲಾಗಲಿ ಎದ್ದು ಕಾಣುವುದು ವಿಶ್ವಕೋಶದ ವಿರಾಟ್ ರೂಪ. ಅವರೊಬ್ಬ ಆಧ್ಯಾತ್ಮಿಕ ಜ್ಯೋತಿಯಾಗಿ ಬೆಳಗಿದಂತೆಯೇ, ಪದಗಳ ಸೃಷ್ಟಿಕರ್ತ, ವೈಚಾರಿಕ ಕ್ರಾಂತಿಯ ಮೇರು, ಮಾತಿನ ಮೋಡಿಕಾರ. ❖